**22-02-2017**

**ಮಾದಕ ವಸ್ತು ಮುಕ್ತ ಕರ್ನಾಟಕ ಕಾರ್ಯಕ್ರಮ ನಮ್ಮ ಕಾಲೇಜಿನಲ್ಲಿ ಆಚರಿಸಿದ ಬಗ್ಗೆ ವರದಿ.**

**ಬಾಪೂಜಿ ಇಂಜಿನಿಯರಿಂಗ್ ಮತ್ತು ತಾಂತ್ರಿಕ ಮಹಾವಿದ್ಯಾಲಯ** ಮತ್ತು **ರಾಷ್ಟ್ರೀಯ ಸೇವಾ ಯೋಜನೆ (NSS), ಐ.ಎಸ್.ಟಿ.ಇ. (ISTE), ಯೂತ್ ರೆಡ್ ಕ್ರಾಸ್** ವಿಭಾಗ **(YRCW), ರಾಷ್ಟ್ರೀಯ ಕೆಡೆಟ್ ಕೋರ್** (NCC) ಬಿ.ಐ.ಇ.ಟಿ ಘಟಕಗಳ ಸಂಯುಕ್ತಾಶ್ರಯದಲ್ಲಿ **"ಮಾದಕ ವಸ್ತು ಮುಕ್ತ ಕರ್ನಾಟಕ"** ಕಾರ್ಯಕ್ರಮವನ್ನು **ದಿನಾಂಕ 21-12-2023,** ಗುರುವಾರ ಬೆಳಗ್ಗೆ **10.30** ಘಂಟೆಗೆ ಕಾಲೇಜಿನ **ಎಸ್.ಎಸ್.ಮಲ್ಲಿಕಾರ್ಜುನ ಸಾಂಸ್ಕೃತಿಕ ಸಭಾಂಗಣದಲ್ಲಿ** ಆಚರಿಸಲಾಯಿತು.

ಈ ಸಮಾರಂಭಕ್ಕೆ ಮುಖ್ಯ ಅತಿಥಿಗಳಾಗಿ **ಶ್ರೀಮತಿ. ಉಮಾ ಪ್ರಶಾಂತ್, ಆರಕ್ಷಕ ಆಧೀಕ್ಷಕರು, ದಾವಣಗೆರೆ, ಉಪಸ್ಥಿತರಿದ್ದರು.** ಅವರು ತಮ್ಮ ಬಾಷಣದಲ್ಲಿ, ಕಾರ್ಯಕ್ರಮದ ಮೂಲ ಉದ್ದೇಶ, ಆಶಯ ಮತ್ತು ಮಾದಕ ವಸ್ತುಗಳಿಂದಾಗುವ ಅನಾಹುತಗಳು, ಸೈಬರ್ ಅಪರಾಧಗಳು ಮತ್ತು ಅದರಿಂದ ವಿದ್ಯಾರ್ಥಿಗಳ ಜೀವನದ ಉದ್ಧೇಶ, ಗುರಿ ಹಾಳಾಗುವುದರ ಬಗ್ಗೆ ಜಾಗರೂಕರಾಗಿರಬೇಕೆಂದು ತಿಳಿಸಿದರು.

ದಾವಣಗೆರೆ ಆರಕ್ಷಕ ಇನ್ಸಪೆಕ್ಟರ್ , **ಶ್ರೀ. ಪ್ರಸಾದ್.ಪಿ,** ಅವರು ತಮ್ಮ ಬಾಷಣದಲ್ಲಿ, ವಿಸ್ತಾರವಾಗಿ ವಿವಿಧ ರೀತಿಯ ಮಾದಕವಸ್ತುಗಳು ಹಾಗು ಅದಕ್ಕೆ ಸಂಬಂಧಿಸಿದ ಕಾನೂನು ಮತ್ತು ಶಿಕ್ಷೆಗಳ ಬಗ್ಗೆ ವಿವರಿಸಿದರು.

ಕಾಲೇಜಿನ **ನಿರ್ದೇಶಕರಾದ ಪ್ರೋ. ವೈ. ವೃಷಭೇಂದ್ರಪ್ಪನ** ವರು ತಮ್ಮ ಅಧ್ಯಕ್ಷೀಯ ಬಾಷಣದಲ್ಲಿ, ಜೀವನದ ಮಹತ್ವದ ಬಗ್ಗೆ ಮಾದಕವಸ್ತುಗಳ ಬಗ್ಗೆ ತಮ್ಮ ಅನುಭವದ ಮಾತುಗಳನ್ನು ತಿಳಿಸಿದರು.

ಈ ಸಮಾರಂಭಕ್ಕೆ **ಡಾ. ಹೆಚ್.ಬಿ.ಅರವಿಂದ, ಪ್ರಾಂಶುಪಾಲರು, ಡಾ.ಟಿ.ಕೆ.ಕೃಷ್ಣಕುಮಾರ್**, ಕಾರ್ಯಕ್ರಮಾದಿಕಾರಿಗಳು, ರಾಷ್ಟ್ರೀಯ ಸೇವಾ ಯೋಜನೆ ಹಾಗು **ಡಾ. ಬಿ.ಎಂ. ಪ್ರಸನ್ನ,** ಸಂಚಾಕರು, ರಾಷ್ಟ್ರೀಯ ಕೆಡೆಟ್ ಕೋರ್ ಉಪಸ್ಥಿತರಿದ್ದರು..

ರಾಷ್ಟ್ರೀಯ ಸೇವಾ ಯೋಜನೆಯ ಸ್ವಯಂಸೇವಕರು ಕಾರ್ಯಕ್ರಮವನ್ನು ನಡೆಸಿಕೊಟ್ಟರು.

ಈ ಕಾರ್ಯಕ್ರಮಕ್ಕೆ ಕಾಲೇಜಿನ ಎಲ್ಲಾ ವಿಭಾಗದ ಮುಖ್ಯಸ್ಥರುಗಳು, ಉಪನ್ಯಾಸಕರುಗಳು, ವಿದ್ಯಾರ್ಥಿಗಳು, ರಾಷ್ಟ್ರೀಯ ಸೇವಾ ಯೋಜನೆಯ ಸ್ವಯಂಸೇವಕರು ಭಾಗವಹಿಸಿದ್ದರು.

**ಪ್ರಾಚಾರ್ಯರು**